A.—Sri A. G. RAMACHANDRA RAO (Minister for Law and Education).—

(*a*) 151.

(*b*) 211.

(*c*) The grade of pay of trained teachers is Rs. 30–1½–45–2–55 and that of the untrained teachers is Rs. 25-1-30-1-45.

ಶ್ರೀ ಎ. ವಿ. ನರಸಿಂಹರೆಡ್ಡಿ.—ಈಗ ಕೆಲವು ಉಪಾಧ್ಯಾಯರಿಗೆ ಎರಡು ವರ್ಷಗಳಿಂದ ಇಕ್ರಿ ಮೆಂಟ್ ಕೊಟ್ಟಿಲ್ಲವೆಂಬುದು ಸರ್ಕಾರದ ಗಮನಕ್ಕೆ ಬಂದಿದೆಯೆ ?

ಶ್ರೀ ಎ. ಜಿ. ರಾಮಚಂದ್ರರಾವ್.—ಬಂದಿಲ್ಲ.

ಶ್ರೀ ಎ. ವಿ. ನರಸಿಂಹರೆಡ್ಡಿ.—ಅದನ್ನು ವಿಚಾರಿಸಿ ಅವರಿಗೆ ಬೇಗ ಇಕ್ರಿಮೆಂಟ್ ಕೊಡುತ್ತೀರಾ ?

ಶ್ರೀ ಎ. ಜಿ. ರಾಮಚಂದ್ರರಾವ್.—ವಿಚಾರಿಸುತ್ತೇವೆ.

Primary Schools in Mysore Taluk.

Q.—505. Sri SHIVANANJE GOWDA (Mysore Taluk).—

Will the Government be pleased to state :—

(*a*) the number of primary schools at present in Mysore Taluk ;

(*b*) the reason for the lesser number of primary schools in this Taluk in spite of the fact that the taluk has a population of more than a lakh and contains more than 160 villages ;

(*c*) the reason for not giving sufficient number of primary schools even though the fact was brought to their notice several times ?

A.—Sri A. G. RAMACHANDRA RAO (Minister for Law and Education).—

(*a*) 109.

(*b*) The number of primary schools, *i.e.*, 109, as against the number of villages, *i.e.*, 160, cannot be considered as inadequate.

(*c*) Does not arise in view of reply to clause (*b*) above.

ಶ್ರೀ ಶಿವನಂಜೇಗೌಡ.—160 ಗ್ರಾಮಗಳಿಗೆ 109 ಸ್ಕೂಲುಗಳಿವೆಯೆಂದು ಹೇಳಿದೆ. ಬಾಕಿ ಗ್ರಾಮಗಳಿಗೆ ಸ್ಕೂಲು ಬೇಡವೆಂಬುದು ತಮ್ಮ ಅಭಿಪ್ರಾಯವೆ ?

*ಶ್ರೀ ಎ. ಜಿ. ರಾಮಚಂದ್ರರಾವ್.—ಕೊಡುವುದಕ್ಕೆ ಇನ್ನೂ ಸಾಧ್ಯವಾಗಿಲ್ಲ.

ಶ್ರೀ ಶಿವನಂಜೇಗೌಡ.—" ಈ ಗ್ರಾಮಗಳಿಗೆ ಸಾಕಾದಷ್ಟು ಪ್ರೈಮರಿ ಸ್ಕೂಲುಗಳು ಏರ್ಪಟ್ಟಿಲ್ಲ ವೆಂಬುದಾಗಿ ಭಾವಿಸುವುದಕ್ಕಾಗುವುದಿಲ್ಲ." ಎಂದು ಉತ್ತರಕೊಟ್ಟಿರುವುದರ ಅರ್ಥವೇನು ?

ಶ್ರೀ ಎ. ಜಿ. ರಾಮಚಂದ್ರರಾವ್.—ಉಳಿದ ಗ್ರಾಮಗಳಿಗೆ ಕೊಡುವುದಕ್ಕಾಗಲಿಲ್ಲವೆಂದು ಸರ್ಕಾರ ಪಶ್ಚಾತ್ತಾಪ ಪಡುತ್ತಿದೆ.

ಶ್ರೀ ಶಿವನಂಜೇಗೌಡ.—ಈ ತಾಲ್ಲೂಕು ಎಲ್ಲಾ ವಿಚಾರದಲ್ಲೂ ಬಹಳ ಹಿಂದುಳಿದಿದೆಯೆಂಬುದು ಸರ್ಕಾರದ ಗಮನಕ್ಕೆ ಬಂದಿದೆಯೆ ?

ಶ್ರೀ ಎ. ಜಿ. ರಾಮಚಂದ್ರರಾವ್.—ಮಾನ್ಯ ಸದಸ್ಯರು ಹೇಳುತ್ತಿರುವುದು ಗಮನಕ್ಕೆ ಬಂದಿದೆ.

ಶ್ರೀ ಶಿವನಂಜೇಗೌಡ.—ಈಗ ಎರಡು ವರ್ಷಗಳಿಂದ ಈ ವಿಚಾರವನ್ನು ಹೇಳುತ್ತಿದ್ದೇವೆ. ಅಲ್ಲಿಂದೀಚೆಗೆ ಎಷ್ಟು ಸ್ಕೂಲುಗಳು ಹೆಚ್ಚಿವೆ ?

ಶ್ರೀ ಎ. ಜಿ. ರಾಮಚಂದ್ರರಾವ್.—ಅದಕ್ಕೆ ನೋಟೀಸ್ ಬೇಕು.

ಶ್ರೀ ಶಿವನಂಜೇಗೌಡ.—ಈಗ ಉಳಿದಿರುವ ಗ್ರಾಮಗಳಿಗಾದರೂ ಮುಂದಿನ ವರ್ಷ ಸ್ಕೂಲನ್ನು ಕೊಡಲು ಏರ್ಪಾಡು ಮಾಡುವಿರಾ ?

ಶ್ರೀ ಎ. ಜಿ. ರಾಮಚಂದ್ರರಾವ್.—ಎಲ್ಲಾ ಗ್ರಾಮಗಳಿಗೂ ಮುಂದಿನ ವರ್ಷ ಕೊಡುವುದಕ್ಕಾಗುವುದಿಲ್ಲ.

Sri H. M. CHANNABASAPPA.—Are the Government aware that the percentage of literacy in Mysore Taluk is the lowest in the State ?

Sri A. G. RAMACHANDRA RAO.—Yes.

Occupational Institute, Chintamani (opening a new Diploma Course.)

Q.—557. Sri M. C. ANJANEYA REDDY (Chintamani).—

Will the Government be pleased to state :—

(*a*) whether any arrangements are being made to open another occupational course in the Occupational Institute at Chaintamani ;

(*b*) if so, the Diploma course decided upon to be opened there ;

(*c*) whether it has come to their notice that many of the students who come here for training in any of the two courses available are getting back to their places for want of seats ;

(*d*) whether it has come to their notice that the diploma course in Machine Tool Technology is very essential ;

(*e*) whether they will arrange to open the said course during the next year ?